Sl. No.	Name of the Zone	Road Works History	Road Inventory
		Filled forms	Filled Forms
1.	Bommanahalli	3	1078
2.	Dasarahalli	4	1719
3.	East	46	2532
4.	Mahadevpura	8	1699
5.	RR Nagar	40	233
6.	South	2196	6065
7.	West	358	1966
8.	Yelahanka	2	5137
	Total	**2657**	**20429**

(ಆ) ರಸ್ತೆ ಇತಿಹಾಸ ಯೋಜನೆಯನ್ನು ದಿನಾಂಕ:30–06–2015 ರೊಳಗೆ ಪೂರ್ಣಗೊಳಿಸಲು ಸೂಕ್ತವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪಾಲಿಕೆಯ ಅಭಿಯಂತರರ ವರ್ಗಕ್ಕೆ ತರಬೇತಿಯನ್ನು ಈಗಾಗಲೇ ನೀಡಲಾಗಿರುತ್ತದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಭಾಗಶಃ ಅಭಿಯಂತರರುಗಳು ವರ್ಗಾವಣೆಯಾಗಿದ್ದು, ಘನತ್ಯಾಜ್ಯ ವಿಲೇವಾರಿಯ ಕೆಲಸಗಳು ಹಾಗೂ ಇನ್ನಿತರೇ ಹೆಚ್ಚುವರಿ ಕೆಲಸಗಳಲ್ಲಿ ತೊಡಗಿರುವುದರಿಂದ ಸದರಿ ರಸ್ತೆ ಇತಿಹಾಸ ಯೋಜನೆಯನ್ನು ಪೂರ್ಣಗೊಳಿಸಲು ವಿಳಂಬವಾಗಿರುತ್ತದೆ.

ಶಸ್ತ್ರಾಸ್ತ್ರ ತ್ಯಜಿಸುವುದು

1149 (1819) ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

(ಅ) ನಕ್ಸಲ್ ಪ್ಯಾಕೇಜ್ ಅಡಿ ಇದುವರೆಗೆ ಅನುಕೂಲ ಪಡೆದಿರುವ ಫಲಾನುಭವಿಗಳು ಎಷ್ಟು ;

(ಆ) ಈ ಪಾಕೇಜ್‌ಗೆ ಖರ್ಚಾದ ಮೊತ್ತವೆಷ್ಟು ;

(ಇ) ನಕ್ಸಲರು ಶಸ್ತ್ರಾಸ್ತ್ರ ತ್ಯಜಿಸುವಂತೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು) :–

(ಅ) ಹಾಗಲಗಂಜಿ ವೆಂಕಟೇಶ್, ಕೋಮಲ, ಜಯ, ಮಲ್ಲಿಕಾ, ಮತ್ತು ಕೋರಣಕೋಟೆ ಕೃಷ್ಣ, ಈ ಐದು ಜನರು ನಕ್ಸಲ್ ಪ್ಯಾಕೇಜ್ ಅಡಿ ಅನುಕೂಲ ಪಡೆದಿರುತ್ತಾರೆ.

(ಆ) ಐದು ಜನರಿಗೆ ನಕ್ಸಲ್ ಪ್ಯಾಕೇಜ್ ಅಡಿ 3,50,000/- (ಮೂರು ಲಕ್ಷ ಐವತ್ತು ಸಾವಿರ ರೂಪಾಯಿಗಳು) ಖರ್ಚಾಗಿರುತ್ತದೆ. ಇದರ ಜೊತೆಗೆ ವಾಸ ಮಾಡಲು ಯೋಗ್ಯವಿರುವಂತಹ ಒಂದು ಮನೆಯನ್ನು ನೀಡಲಾಗಿದೆ ಹಾಗೂ ಎರಡು ಎಕರೆ ಜಮೀನನ್ನು ಪ್ರತಿಯೊಬ್ಬರಿಗೂ ನೀಡಲು ವಿಫಾರಸ್ಸು ಮಾಡಲಾಗಿದೆ.

(ಇ) ಸರ್ಕಾರವು ಕರ್ನಾಟಕ ರಾಜ್ಯದಲ್ಲಿ ಶರಣಾಗತಿಯಾಗುವ ಎಡಪಂಥೀಯ ಉಗ್ರಗಾಮಿಗಳನ್ನು ಮುಖ್ಯವಾಹಿನಿಗೆ ತರಲು ಹಾಗೂ ಅವರಿಗೆ ಪುನರ್‌ವಸತಿ ಸೌಲಭ್ಯ ಕಲ್ಪಿಸಲು Naxal Surrender Policy ಅನುಷ್ಠಾನಗೊಳಿಸಿದೆ.

ಪೊಲೀಸ್ ಇಲಾಖೆಯನ್ನು ಆಧುನೀಕರಣಗೊಳಿಸುವುದು

1150 (1820) ಡಾ॥ ರಫೀಕ್ ಅಹ್ಮದ್ ಎಸ್.(ತುಮಕೂರು) :- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

(ಅ) ರಾಜ್ಯದಲ್ಲಿ ಪೊಲೀಸ್ ಇಲಾಖೆ ಆಧುನೀಕರಣಕ್ಕೆ ಕಳೆದ 5 ವರ್ಷಗಳಲ್ಲಿ ಸರ್ಕಾರ ವೆಚ್ಚ ಮಾಡಿರುವ ಮೊತ್ತವೆಷ್ಟು ;

(ಆ) ಹಾಗಿದ್ದಲ್ಲಿ ಯಾವ ಯಾವ ಪೊಲೀಸ್ ಠಾಣೆಗಳನ್ನು ಆಧುನೀಕರಣಗೊಳಿಸಲಾಗಿದೆ.

(ಇ) ತುಮಕೂರು ಜಿಲ್ಲೆಯಲ್ಲಿ ಪೊಲೀಸ್ ಠಾಣೆಗಳನ್ನು ಆಧುನೀಕರಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು) :-

(ಅ)

ವರ್ಷ	ಬಿಡುಗಡೆಯಾದ ಮೊತ್ತ (ರೂ. ಕೋಟಿಗಳಲ್ಲಿ)	ಖರ್ಚು ಮಾಡಿದ ವೆಚ್ಚ (ರೂ. ಕೋಟಿಗಳಲ್ಲಿ)
2009-10	63.96	63.96
2010-11	83.01	7.38
2011-12	53.37	18.43
2012-13	32.48	4.01
2013-14	34.00	34.00